ಹಿಡಿದುಕೊಂಡು ಹೋಗು. ಈ ಮಳೆ-ಗಾಳಿ ನೋಡಿದ್ರೆ ಛತ್ರಿ ನಿನ್ನನ್ನು ಹಾರಿಸಿಕೊಂಡು ಹೋಗಿ ಬಿಟ್ವಾತು...' ಎನ್ನುತ್ತಿದ್ದರು. ಆಗ ರಸ್ತೆಯಲ್ಲಿ ಹರಿಯುವ ನೀರಿನಲ್ಲಿ ಕಾಲು ಆಡಿಸುತ್ತಾ ಛತ್ರಿ ಅಂಚಿನಲ್ಲಿ ಇಳಿಯುತ್ತಿದ್ದ ನೀರನ್ನು ಒಂದು ಬೊಗಸೆಯಲ್ಲಿ ಹಿಡಿದುಕೊಂಡು ಕುಡಿಯುತ್ತಾ ಹೋಗುವ ಸಂಭ್ರಮಕ್ಕೆ ಎಣೆಯೇ ಇಲ್ಲ. ಹೀಗೆ ಈ ಆನಂದದಲ್ಲಿ ಮೈಮರೆತು, ಅವರು ಏನು ತರಲು ಹೇಳಿದ್ದರು ಎಂಬುದನ್ನು ಮರೆತು ಮತ್ತೆ ಹಿಂದಕ್ಕೆ ಹೋಗಿ ಕೇಳಿಸಿಕೊಂಡು ಬೈಸಿಕೊಂಡು, 'ಕೊನೆಗೂ ತಂದ್ಯಲ್ಲ' ಎನ್ನುವ ಮಾತು... ಮಳೆಯನ್ನು ಮರೆಯಲಾದೀತೆ?

ನನಗೆ ಜಗುಲಿಯ ಮೇಲೆ ಕುಳಿತು ಮಳೆ ನೋಡುವುದೆಂದರೆ ತುಂಬ ಖುಷಿಯ ವಿಷಯ. ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಹೊರಗೆ ಓಡಿ ಹೋಗಿ ಒಳಕ್ಕೆ ಓಡಿ ಬರುತ್ತಿದ್ದೆ. ಮಳೆಯಲ್ಲಿ ನೆನೆಯುವುದೆಂದರೆ ಆಗುವ ಸಂತೋಷವೇ ಬೇರೆ. ಈ ಅಬ್ಬರದ ಗಾಳಿ ಮಳೆಯಲ್ಲಿ ಗುಡುಗು ಸಿಡಿಲು ಮಿಂಚಿಗೆ ಹೆದರಿಕೆಯಾಗುತ್ತಿತ್ತು. ಯಾರೂ ಇಲ್ಲದಿದ್ದಾಗ ನನಗೆ ಸಿಡಿಲು ಬಡಿದರೆ ಎಂದು ಭಯವಾಗುತ್ತಿತ್ತು. ಅದಕ್ಕೆ ಅವ್ವ, 'ಕೆಲಸಕ್ಕೆ ಹೋಗುವಾಗ ಮಳೆಯಲ್ಲಿ ನೆನೆಯಬೇಡ, ಮಿಂಚು, ಗುಡುಗು ಬರದಾಂಗೆ ಬಾಗಿಲಿಗೆ ಕತ್ತಿ, ಕುಡ್ಲು, ಕೊಡಲಿನ ಹಾಕ್ಕೋಬೇಕು' ಎಂದು ಹೇಳಿ ಹೋಗುತ್ತಿತ್ತು. ರಜೆ ದಿನವಾದರೆ ಮಕ್ಕಳ ಸೈನ್ಯವೇ ನಮ್ಮ ಮನೆಯಲ್ಲಿ ಇರುತ್ತಿತ್ತು. ಯಾವುದೇ ಕಾರಣಕ್ಕೂ ಮಳೆಯಲ್ಲಿ ನೆನೆಯಬೇಡ ಎಂದು ಅವ್ವ ಹೇಳುವುದಕ್ಕೆ ಕಾರಣವಿತ್ತು. ನಾನು ಮಳೆಯಲ್ಲಿ ನೆನೆದಾಗಲೆಲ್ಲ ಜ್ವರ ಖಂಡಿತ ಬರುತ್ತಿತ್ತು. ಜ್ವರ ಬಂದಾಗ ಈ ಕಡೆ ನನ್ನನ್ನು ನೋಡಿಕೊಳ್ಳುವುದೋ, ಆ ಕಡೆ ಕೂಲಿಗೆ ಹೋಗುವುದೋ ಎಂದು ಅವ್ವನಿಗೆ ದೊಡ್ಡ ತಲೆನೋವಾಗಿ ಪರಿಣಮಿಸುತ್ತಿತ್ತು. ನನ್ನ ಬಾಲ್ಯದ ಬಹುತೇಕ ಮಳೆಗಾಲದಲ್ಲಿ ನನಗೆ ಜ್ವರ ಬಂದಿದೆ. ಇದರಿಂದಾಗಿ ಅವ್ವನಿಗೆ ಬದುಕು ಹೈರಾಣವಾಗಿತ್ತು. ಕೆಲವೊಮ್ಮೆ ಮಳೆ ಶುರುವಾದರೆ ದಿನಗಟ್ಟಲೆ ಹಗಲು ರಾತ್ರಿ ಎನ್ನದೇ ಹನಿ ತುಂಡಾಗದೇ ಸುರಿಯುತ್ತಿತ್ತು. ಗಾಳಿ ಮಳೆ ಜಾಸ್ತಿಯಾದರೆ ದನ ಕರುಗಳನ್ನು ಹೊರಗೆ ಬಿಡದೇ ಕೆಲಸ ಕಾರ್ಯಗಳನ್ನು ನಿಲ್ಲಿಸಿ ರೈತರು ಮನೆಯಲ್ಲಿಯೇ ಬೆಚ್ಚಗೆ ಹುರಿದ ಹಲಸಿನಗಾಳು ತಿನ್ನುತ್ತ, ಕಾಫಿ ಕುಡಿಯುತ್ತ, ಸಾಧ್ಯವಾದಷ್ಟು ತಮ್ಮ ವಿರೋಧಿಗಳನ್ನು ಬೈಯುವ ಹಾಗೆ ಮಳೆಯನ್ನು ಬೈಯುವುದು ಮಾಮೂಲಿಯಾಗಿತ್ತು. ಆದರೆ, ಬಡವರಿಗೆ ಮಾತ್ರ ಈ ಜೋರು ಮಳೆಯಿಂದಾಗಿ ಕೂಲಿ ತಪ್ಪುತ್ತಿತ್ತು. ಈಗಿನ ಹಾಗೆ ಸರ್ಕಾರದ ಅನ್ನಭಾಗ್ಯವಿದ್ದಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಆಗ ನಮ್ಮಂತಹ ಕುಟುಂಬಗಳಿಗೆ 'ಮಳೆಯ ಭಾಗ್ಯ'ದಲ್ಲಿಯೇ ಹೊಟ್ಟೆ ತುಂಬಿಸಿಕೊಳ್ಳಬೇಕಿತ್ತು.

ಮಳೆಗಾಲವೆಂದರೆ, ಬಾಲ್ಯವೆಂದರೆ, ನೆನಪುಗಳ ಮಳೆ ಸುರಿಯುತ್ತದೆ. ಮಳೆಗಾಲದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಮೂತ್ರಕ್ಕೆ ಹೋಗುವುದು ಹೆಚ್ಚಿರುತ್ತದೆ. ಅದಕ್ಕೆ ಅವ್ವ ನನಗೆ, 'ಮಳೆಗಾಲದಲ್ಲಿ ರಾತ್ರಿ ಹೊತ್ತು ಹೆಚ್ಚು ನೀರು ಕುಡಿಬೇಡ, ಮಧ್ಯರಾತ್ರಿ ಏಳುತ್ತೀಯ' ಎಂದು ಅರ್ಧ ಗ್ಲಾಸ್ ನೀರು ಕೊಟ್ಟರೆ ಜಾಸ್ತಿ. ಆದರೆ, ದನದ ಮಾಂಸದ ಸಾರು ತಿಂದ ದಿನ ಸಾರು ಖಾರವಾಗಿ ಹೆಚ್ಚು ನೀರು ಕುಡಿದು ಬಿಡುತ್ತಿದ್ದೆ.

ಮಳೆಗಾಲದ ಒಂದು ಮಧ್ಯರಾತ್ರಿ ಅರ್ಜಂಟಾಗಿ ವಂದ (ಮೂತ್ರ) ಮಾಡಬೇಕೆನಿಸಿತು. ಅಪ್ಪ ಕೆಮ್ಮುತ್ತಲೇಯಿತ್ತು. ಸದ್ಯ ಅಪ್ಪ ಎಚ್ಚರವಾಗಿದೆ ಎಂದು ಅಪ್ಪನನ್ನು ಕೂಗಿದೆ. 'ಅಪ್ಪ, ನಾನು ವಂದ ಮಾಡಲು ಹೋಗಬೇಕು' ಎಂದೆ. 'ಸುಮ್ಮನೆ ಮಂಕ್ಕಳಲಾ ಬೆಳಗ್ಗೆ ಹೋಗುವಿಯಂತೆ' ಎಂದು ತಾನು ಏಳಲಾಗದಿರ ಗದರಿದ. ನನಗೆ ತುಂಬ ಅರ್ಜಂಟಾಗಿತ್ತು. ಅವ್ವ ಗಾಢನಿದ್ದೆಯಲ್ಲಿತ್ತು. ವಿಧಿಯಿಲ್ಲದೆ ಅವ್ವನನ್ನು ವಂದಕ್ಕೆ ಏಳಿಸಿದೆ. ಅವ್ವ ಒಂದು ಕೂಗಿಗೆ ಎಚ್ಚರವಾಗಿ 'ಏಳ್ಲಾ ಬೇಗನೆ. ಈಗ ನಿದ್ರೆ ಹತ್ತಿತ್ತು' ಅಂತ ಹೇಳುತ್ತಲೇ ಬಾಗಿಲು ತೆಗೆದು ನೋಡಿದರೆ ಆಕಾಶದಿಂದ ಬಿಟ್ಟು ಬಿಡದೇ ನೀರು ಸುರಿಯುತ್ತಿರುವ ಹಾಗೇ ಮಳೆ ಸುರಿಯುತ್ತಿದೆ. ಅದನ್ನು ನೋಡುತ್ತಲೆ ವಂದ ಮಾಡಲು ನಿಂತರೆ ವಂದ ಬರುತ್ತಿಲ್ಲ. ಅವ್ವ, 'ಆಯ್ತಾ ಮಗನೇ' ಅಂದಾಗ ಎಚ್ಚರಗೊಂಡೆ. ಅದೊಂದು ರೀತಿಯ ಮಳೆಯ ಬೆಳಕಾ, ನೀರ ಬೆಳಕಾ, ಮಂದ ಬೆಳಕಾ... ಕತ್ತಲೆಯನ್ನು ಬೆಳಕು ದಾಟುತ್ತಿದೆಯಾ, ಬೆಳಕಿನಲ್ಲಿ ಕತ್ತಲೆ ದಾಟುತ್ತಿದೆಯಾ... ಎದೆಯಲ್ಲಿ ಏನೋ ತಣ್ಣಗೆ ಹರಿದಂಗಾಯಿತು. ಮಳೆ ಭಯಂಕರವಾಗಿ ಕಾಣಿಸುತ್ತಿತ್ತು. ಆ ಮಳೆಯ ನಡುವೆ ನಾನು ಗೊಂಬೆಯಾಗಿ... ಯಾರೋ ಹಿಡಿದು ತೇಲಾಡಿಸಿದಂತೆ